**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 16/2024**

ಫ್ರಾ.ಸಾಃ 1

ಚಾಸಾಃ 1

**ದಿನಾಂಕಃ24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

| | |
|---|---|
| ಹೆಸರು | : ಜಿ. ಬಾಬೂ ಪ್ರಸಾದ್ |
| ತಂದೆಯ ಹೆಸರು | : ಜಿ. ನಾಗರಾಜ್ |
| ವಯಸ್ಸು | : 27 ವರ್ಷ |
| ಕೆಲಸ | : ಚಾಲಕ |
| ವಾಸ ಸ್ಥಳ | : ಕೀಲಪಲ್ಲಿ, ಚಿತ್ತೂರು ಜಿಲ್ಲೆ |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ 2 ನನ್ನ ತಂದೆ, ಚಾಸಾ 3 ನನ್ನ ತಾಯಿ, ಚಾಸಾ 4, 5 ಮತ್ತು 6 ಗೊತ್ತಿಲ್ಲ. ಚಾಸಾ 2 ಮತ್ತು 3 ರವರಿಗೆ ಅಪಘಾತವಾದ ಬಗ್ಗೆ ನಾನು ದೂರನ್ನು ನೀಡಿಲ್ಲ, ಈ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಸಮಕ್ಷಮ ಮಹಜರ್ ಮಾಡಿಲ್ಲ ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮರು ಹೇಳಿಕೆ ಪಡೆದಿಲ್ಲ. ನಾನು ಬೇರೆ ವೈಯುಕ್ತಿಕ ಕೆಲಸದ ನಿಮಿತ್ತ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೋಲೀಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ.

ಸಾಕ್ಷಿಗೆ ದೂರು ಮತ್ತು ಮಹಜರ್ ಮತ್ತು ಮುಚ್ಚಳಿಕೆಯನ್ನು ತೋರಿಸಲಾಗಿ ಅವುಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳು ನಿಪಿ1 ರಿಂದ 3 ಸಾಕ್ಷಿಯ ಸಹಿಗಳನ್ನು ನಿಪಿ1(ಎ) ಮತ್ತು ನಿಪಿ2(ಎ) , ನಿಪಿ3(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ. ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ 03.01.2023 ರಂದು ಚಾಸಾ 2 ಮತ್ತು 3 ರವರು ಕನ್ನಸಂದ್ರ ಗ್ರಾಮಕ್ಕೆ ಹೋಗಿದ್ದು , ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಯಾರೋ ಅಪರಿಚಿತರು ಕರೆ ಮಾಡಿ ಜೆ ಎಸ್ ಆರ್ ಟೋಲ್ ಬಳಿ ನನ್ನ ತಂದೆ ತಾಯಿಗೆ ಅಪಘಾತವಾಗಿದೆ ಎಂದು ತಿಳಿಸಿದ್ದು, ನಾನು ತಕ್ಷಣ ಸ್ದಳಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ವಿಚಾರಿಸಲಾಗಿ ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಚಾಸಾ 2 ವತ್ತು 3 ಎಪಿ 03.ಬಿ ವೈ 2843 ದ್ವಿ ಚಕ್ರ ವಾಹನದಲ್ಲಿ ನಮ್ಮ ಗ್ರಾಮಕ್ಕೆ ಬರಲು ನಂಗಲಿ ಚಿತ್ತೂರು ರಸ್ತೆಯ ಜೆ ಎಸ್ ಆರ್ ಟೋಲ್ ನಿಂದ ಮುಂದೆ ಬಂದು ರಸ್ತೆಯ ಬಳಿ ದ್ವಿ ಚಕ್ರ ವಾಹನ ನಿಲ್ಲಿಸಿ ನನ್ನ ತಾಯಿಯನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಚಮಕಲಹಳ್ಳಿ ಗೇಟ್ ಬಳಿ ಚಿಕನ್ ತರಲು ಮುಂದೆ ಹೋಗುತ್ತಿದ್ದಾಗ ನಂಗಲಿ ಕಡೆಯಿಂದ ಕೆಎ 03.ಎನ್ ಎಫ್ 9571 ಕಾರ್ ನ ಚಾಲಕ ಅತೀ ವೇಗ ಮತ್ತು ಅಜಾರಕೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ತಂದೆ ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ಅದರ ಪರಿಣಾಮ ನನ್ನ ತಂದೆ ದ್ವಿಚಕ್ರ ವಾಹನದ ಸಮೇತ ಕೆಳಗೆ ಬಿದ್ದು ತಲೆ, ಸೊಂಟ, ಕಾಲಿಗೆ ರಕ್ತ ಗಯವಾಗಿದ್ದು , ನನ್ನ ತಾಯಿ ಮತ್ತು ಇತರರು ಉಪಚರಿಸಿ ಕೋಲಾರದ ಆಸ್ಪತ್ರೆಗೆ ದಾಖಲಿಸಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ನಿಪಿ 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 04.01.2023 ರಂದು ಪೋಲೀಸರು ಅಪಘಾತ ನಡೆದ ಸ್ಥಳಕ್ಕೆ ಬೇಟಿ ನೀಡಿ ನಾನು ತೋರಿಸಿದ ಸ್ದಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೆ ನಿಪಿ 2 ರಂತೆ ಮಹಜರ್ ಮಾಡಿ ಅಪಘಾತಕ್ಕೊಳಗಾದ ಎರಡೂ ವಾಹನಗಳನ್ನು ಅಮನತ್ತುಪಡಿಸಿಕೊಂಡು ಸ್ಥಳಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ವಾಹನಗಳನ್ನು ನಾನು ನಿಪಿ 3 ರಂತೆ ಮುಚ್ಚಳಿಕೆ ಬರೆದುಕೊಟುಟ ವಾಹನ ಬಿಡುಗಡೆ ಮಾಡಿಸಿಕೊಂಡಿರುತ್ತೇನ ಎಂದರೆ ಸರಿಯಲ್ಲ. ದಿಃ 03.01.2023 ರಂದು ಈಗ

ಓದಿ ಹೇಳಿದಂತೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ4  ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಆ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/-
(ಶ್ರೀಮತಿ ರೋಹಿಣಿ. ಡಿ)
1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 16/2024**

ಫ್ರಾ.ಸಾಃ 2

ಚಾಸಾಃ 2

**ದಿನಾಂಕಃ24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

ಹೆಸರು : ನಾಗರಾಜ

ತಂದೆಯ ಹೆಸರು : ವೆಂಕಟೇಶಪ್ಪ

ವಯಸ್ಸು : 48 ವರ್ಷ

ಕೆಲಸ : ಚಾಲಕ

ವಾಸ ಸ್ಥಳ : ಕೀಲಪಲ್ಲಿ, ಚಿತ್ತೂರು ಜಿಲ್ಲೆ

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ 1 ನನ್ನ ಮಗ, ಚಾಸಾ 3 ನನ್ನ ಹೆಂಡತಿ, ಚಾಸಾ 4, 5 ಮತ್ತು 6 ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ. ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ 03.01.2023 ರಂದು ನಾನು ಚಾಸಾ 3 ರವರೊಂದಿಗೆ ಕನ್ನಸಂದ್ರ ಗ್ರಾಮಕ್ಕೆ ಹೋಗಿ ವಾಪಸ್ಸು ಬರುವಾಗ ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಎಪಿ 03.ಬಿ ವೈ 2843 ದ್ವಿ ಚಕ್ರ ವಾಹನದಲ್ಲಿ ನಮ್ಮ ಗ್ರಾಮಕ್ಕೆ ಬರಲು ನಂಗಲಿ ಚಿತ್ತೂರು ರಸ್ತೆಯ ಜೆ ಎಸ್ ಆರ್ ಟೋಲ್ ನಿಂದ ಮುಂದೆ ಬಂದು ರಸ್ತೆಯ ಬಳಿ ದ್ವಿಚಕ್ರ ವಾಹನ ನಿಲ್ಲಿಸಿ ನನ್ನ ಹೆಂಡತಿಯನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಚಮಕಲಹಳ್ಳಿ ಗೇಟ್ ಬಳಿ ಚಿಕನ್ ತರಲು ದ್ವಿಚಕ್ರ ವಾಹನದಲ್ಲಿ ಮುಂದೆ ಹೋಗುತ್ತಿದ್ದಾಗ ನಂಗಲಿ ಕಡೆಯಿಂದ ಕೆಎ 03.ಎನ್ ಎಫ್ 9571 ಕಾರ್ ನ ಚಾಲಕ ಅತೀ ವೇಗ ಮತ್ತು ಅಜಾರಕೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದು,

ಅದರ ಪರಿಣಾಮ ನಾನು ದ್ವಿಚಕ್ರ ವಾಹನದ ಸಮೇತ ಕೆಳಗೆ ಬಿದ್ದು ತಲೆ, ಸೊಂಟ, ಕಾಲಿಗೆ ರಕ್ತ ಗಯವಾಗಿದ್ದು, ನನ್ನ ಹೆಂಡತಿ ಮತ್ತು ಇತರರು ಉಪಚರಿಸಿ ಕೋಲಾರದ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ದಿಃ 31.01.2023 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಆ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/–

(ಶ್ರೀಮತಿ ರೋಹಿಣಿ. ಡಿ)
1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು

**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಸಿಸಿ. ನಂಬರ್ 16/2024**

ಫ್ರಾ.ಸಾಃ **3**

ಚಾಸಾಃ **3**

**ದಿನಾಂಕಃ24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

| | |
|---|---|
| ಹೆಸರು | : ಶ್ರೀಮತಿ ಚಿಟ್ಟೆಮ್ಮ |
| ಗಂಡನ ಹೆಸರು | : ನಾಗರಾಜ್ |
| ವಯಸ್ಸು | : 45 ವರ್ಷ |
| ಕೆಲಸ | : ವ್ಯವಸಾಯ |
| ವಾಸ ಸ್ಥಳ | : ಕೀಲಪಲ್ಲಿ, ಚಿತ್ತೂರು ಜಿಲ್ಲೆ |

**<u>ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ</u>**

ಚಾಸಾ 1 ನನ್ನ ಮಗ, ಚಾಸಾ 2 ನನ್ನ ಗಂಡ, ಚಾಸಾ 4, 5 ಮತ್ತು 6 ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ. ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>**

ದಿಃ **03.01.2023** ರಂದು ನಾನು ಚಾಸಾ **2** ರವರೊಂದಿಗೆ ಕನ್ನಸಂದ್ರ ಗ್ರಾಮಕ್ಕೆ ಹೋಗಿ ವಾಪಸ್ಸು ಬರುವಾಗ ಮದ್ಯಾಹ್ನ **2.00** ಗಂಟೆ ಸಮಯದಲ್ಲಿ ಎಪಿ **03**.ಬಿ ವೈ **2843** ದ್ವಿ ಚಕ್ರ ವಾಹನದಲ್ಲಿ ನಮ್ಮ ಗ್ರಾಮಕ್ಕೆ ಬರಲು ನಂಗಲಿ ಚಿತ್ತೂರು ರಸ್ತೆಯ ಜೆ ಎಸ್ ಆರ್ ಟೋಲ್ ನಿಂದ ಮುಂದೆ ಬಂದು ರಸ್ತೆಯ ಬಳಿ ದ್ವಿಚಕ್ರ ವಾಹನ ನಿಲ್ಲಿಸಿ ನನ್ನನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಚಮಕಲಹಳ್ಳಿ ಗೇಟ್ ಬಳಿ ಚಿಕನ್ ತರಲು ಚಾಸಾ **2** ರವರು ದ್ವಿಚಕ್ರ ವಾಹನದಲ್ಲಿ ಮುಂದೆ ಹೋಗುತ್ತಿದ್ದಾಗ ನಂಗಲಿ ಕಡೆಯಿಂದ ಕೆಎ **03**.ಎನ್ ಎಫ್ **9571** ಕಾರ್ ನ ಚಾಲಕ ಅತೀ ವೇಗ ಮತ್ತು ಅಜಾರಕೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ

ಹೊಡೆದಿದ್ದು, ಅದರ ಪರಿಣಾಮ ಚಾಸಾ 2 ರವರು ದ್ವಿಚಕ್ರ ವಾಹನದ ಸಮೇತ ಕೆಳಗೆ ಬಿದ್ದು ತಲೆ, ಸೊಂಟ, ಕಾಲಿಗೆ ರಕ್ತ ಗಯವಾಗಿದ್ದು, ನಾನು ಮತ್ತು ಇತರರು ಉಪಚರಿಸಿ ಕೋಲಾರದ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ದಿಃ 31.01.2023 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಆ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/-
(ಶ್ರೀಮತಿ ರೋಹಿಣಿ. ಡಿ)
1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು